PATIL K. F.
HANUMANA MATTI P.O:
DIST: DHARWAR

ಶ್ರೀ ಜಗಜೀವನರಾಮರ ಭಾಷಣ

—o—

ಮಿತ್ರರೆ,

ನಮ್ಮ ದೇಶದ ಇತಿಹಾಸದಲ್ಲಿ ಇಂದಿನ ಸಮಯವು ತುಂಬಾ ಚಿಂತಾಜನಕವಾದದ್ದು. ಈ ಮಹಾ ಸಂಸ್ಥೆಯಾದ ಕಾಂಗ್ರೆಸ್ಸಿನ ಜೀವನದಲ್ಲಿ ಕ್ರಾಂತಿಯತ್ತ ತಿರುಗಿಸುವ ಕಾಲವಿದು. ಇಂಥ ಕಾಲದಲ್ಲಿ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿ ನಿಮ್ಮ ವಿಶ್ವಾಸ ತೋರಿಸಿದ ಬಗ್ಗೆ ನಾನು ನಿಮಗೆ ಕೃತಜ್ಞನಾಗಿದ್ದೇನೆ.

ಯಾವುದೇ ಒಂದು ಸಂಸ್ಥೆಯಲ್ಲಿ ಆಂತರಿಕ ಪ್ರಜಾಪ್ರಭುತ್ವದಲ್ಲಿ ಸಂಕೋಚ ತಂದರೆ ಇಲ್ಲವೆ ಪ್ರಜಾಪ್ರಭುತ್ವ ಪದ್ಧತಿಯನ್ನೇ ಪಾಲಿಸದಿದ್ದರೆ ಆ ಸಂಸ್ಥೆಯು ಸರ್ವಾಧಿಕಾರಿಗಳ ಕೈಕೆಳಗೆ ಹೋಗುವದು ಸ್ವಾಭಾವಿಕ. ಆಗ ಆ ಸಂಸ್ಥೆಯ ಸದಸ್ಯರು ಸಂಸ್ಥೆಯ ಅಭಿಮಾನ ಬಿಟ್ಟು ತಮ್ಮ ಮೇಲೆ ಅಧಿಕಾರ ನಡೆಸುವ ದರ್ಪಾಧಿಕಾರಿಗೇನೇ ವಿಧೇಯತೆ ತೋರಿಸುವರು. ಕಾಂಗ್ರೆಸ್ಸಿನ ಪಕ್ಷದೇ ಬರಹವೂ ಹೀಗೇ ಆಗಿ ಅದು ಜನಸಾಮಾನ್ಯನ ಸಹಾನುಭೂತಿ ಕಳೆದುಕೊಂಡು ಅವನಿಂದ ದೂರ ದೂರ ಸರಿದು ದುರ್ಬಲವಾಗುತ್ತ ನಡೆದಿದೆ. ಕಾಂಗ್ರೆಸ್ಸನ್ನು ನಾವು ಸಬಲಗೊಳಿಸಬೇಕಿದ್ದರೆ ಅದರ ಆಂತರಂಗಿಕ ಪ್ರಜಾಪ್ರಭುತ್ವ ಪಾಲಿಸುವಿಕೆಯನ್ನು ನಾವು ಉಂಟುಮಾಡಲೇಬೇಕು.

ಇತ್ತೀಚಿಗೆ ನಮ್ಮ ಈ ಮಹಾಸಂಸ್ಥೆಯಲ್ಲಿ ಉಂಟಾಗಿರುವ ಕೋಚನೀಯ ಗಲಾಟೆ ನಿಮಗೆಲ್ಲಾ ಗೊತ್ತಿದೆ. ಅದರಿಂದ ಈ ಮಹಾ ಸಂಸ್ಥೆಯು ಅಲ್ಲಾಡಿ ಹೋಗಿದೆ. ಎ. ಐ. ಸಿ. ಸಿ. ಯ ಬಹುಸಂಖ್ಯಾಕ ಸದಸ್ಯರು ಈ ಪರಿಸ್ಥಿತಿಯನ್ನು ವಿಚಾರಿಸಲೋಸುಗ ಅಧಿವೇಶನ ಕರೆಯಬೇಕೆಂದು ಅಧ್ಯಕ್ಷರಿಗೆ ಕೋರಿಕೆ ವಿನಂತಿ ಸಲ್ಲಿಸಿದರೂ ಮತ್ತು ಆ ಪ್ರಕಾರ ಮಾಡಲು ಸಂಸ್ಥೆಯ ಘಟನೆಯಲ್ಲಿ ಕಟ್ಟಳೆ ಇದ್ದರೂ ಆ ಪ್ರಕಾರ ಅಧಿವೇಶನ ಕರೆಯುವದಕ್ಕೆ ಸಮ್ಮತಿಸಲಿಲ್ಲ ! ಇಂಥವರೇ ಪ್ರಜಾಪ್ರಭುತ್ವ ಶಿಸ್ತು ಇತ್ಯಾದಿ ಮಾತನಾಡುತ್ತಾರೆ ! ಇಂಥವರೇ ಪ್ರಧಾನ ಮಂತ್ರಿಯವರನ್ನು ಒಮ್ಮೆ "ಕಮ್ಯುನಿಸ್ಟ" ಎಂದೂ ಇನ್ನೊಮ್ಮೆ "ಫ್ಯಾಶಿಸ್ಟ" ಎಂದೂ ಕರೆಯುತ್ತಿದ್ದಾರೆ !

ನಮ್ಮ ಸರಕಾರಕ್ಕೆ ನಾವು ಗೌರವ ತೋರಿಸುವದಿದ್ದರೆ ಆ ಸರಕಾರದ ಪ್ರಧಾನ ಮಂತ್ರಿಗಳಿಗೆ ಗೌರವ ತೋರಿಸಲೇಬೇಕು. ಈ ಕದಡಿದ ವಾತಾವರಣ ಒಮ್ಮೆ ಶಾಂತವಾಯಿತೆಂದರೆ ಆಗ ಪ್ರಧಾನ ಮಂತ್ರಿ ಏನು ಮಾಡಿದರೆಂಬುದು ತಾನೇ ಗೊತ್ತಾಗುವದು. ಪ್ರಜಾಪ್ರಭುತ್ವದ ಸತ್‌ಸಂಪ್ರದಾಯವನ್ನು ಪಾಲಿಸಿದವರು ಪ್ರಧಾನ ಮಂತ್ರಿಗಳೇ ಎಂದು ಮುಂದಿನ ಪೀಳಿಗೆಯು ಸದಾಕಾಲ ಸ್ಮರಿಸುವದು. ಆದರೆ ಸದ್ಯಕ್ಕೆ ನಮ್ಮ ಬಗ್ಗೆ ಅತ್ಯಂತ ಕಠೋರ ಶಬ್ದಗಳನ್ನು ಉಪಯೋಗಿಸಲಾಗುತ್ತಿದೆ. ಪ್ರಧಾನ ಮಂತ್ರಿಗಳ ಕೈಯಲ್ಲಿ ಸರಕಾರದ ಸೂತ್ರ ಕೊಡುವದಕ್ಕಿಂತ ಜಾತಿವಾದಿಗಳಾದಂಥ ಸನಾತನ ನಡವಳಿಕೆಯುಳ್ಳಂಥ ಜನರ ಕೈಯಲ್ಲಿ ತಮ್ಮ ವಿಚಾರಸಾಮ್ಯವುಳ್ಳವರೆಂದು ಹೇಳಿಕೊಳ್ಳುತ್ತ ಅಧಿಕಾರ ಒಪ್ಪಿಸಲು ಯಾರು ಸನ್ನದ್ಧರಾಗಿರುವರೋ ಅವರೇ ತಾವು ಪ್ರಜಾಪ್ರಭುತ್ವ, ಸರ್ವಸಮಾನತ್ವ ಮತ್ತು ಜಾತ್ಯತೀತತೆಯ ಗುತ್ತಿಗೆದಾರರಂತೆ ! ಅವರೇ ರಾಷ್ಟ್ರವನ್ನು ರಕ್ಷಿಸುವವರಂತೆ !! ಅಂಥವರಿಗೆ ನಾವು ಭಗವಾನ್ ಬುದ್ಧದೇವನು ಹೇಳಿದ ಈ ಒಂದೇ ಒಂದು ಮಾತನ್ನು ಹೇಳಬಯಸುವೆ–"ಬಯ್ಯುವದೆಂದರೆ ಎದುರು ಗಾಳಿಗೆ ಉಗುಳಿದಂತೆ. ಅದು ನಿನ್ನ ಮೇಲೆಯೇ ತಿರುಗಿ ಎರಗುವದು," ಆದ್ದರಿಂದ ರಾಡಿಯನ್ನು ರಾಡಿಯಿಂದ ತೊಳೆಯಲು ನಾವು ಹೋಗುವಂತಿಲ್ಲ.

ಈಗಿನ ದೇಶದ ಪರಿಸ್ಥಿತಿ ನೋಡಿದರೆ ಎಲ್ಲ ರಾಜಕೀಯ ಪಕ್ಷಗಳೂ ವಿಭಜನೆ ಹೊಂದುತ್ತಲಿವೆ. ಕಾಂಗ್ರೆಸ್ಸು ಕೂಡಾ ಅದೇ ಹಂತದಲ್ಲಿ ಕಾಲಿಟ್ಟಿದೆ. ಹೀಗೆ ಎಲ್ಲ ಪಕ್ಷಗಳು ಒಡೆದು ಚೂರುಚೂರಾದರೆ ಪ್ರಜಾಪ್ರಭುತ್ವಕ್ಕೇ ಅಳಿಗಾಲ ಬರಬಹುದೆಂಬ ಶಂಕೆ ಉಂಟಾಗುತ್ತದೆ. ಆದರೆ ಇನ್ನೂ ಒಂದು ವಿಚಾರ ಉಂಟಾಗಲು ಸಾಧ್ಯವಿದೆ. ಈ ತುಣುಕುಗಳಲ್ಲಿ ವಿಚಾರಸಾಮ್ಯವುಳ್ಳವರೆಲ್ಲ ಒತ್ತೊಟ್ಟಿಗೆ ಸೇರಿಕೊಂಡು ಧೃವೀಕರಣವಾಗಿ ವಿಚಾರಸಾಮ್ಯವುಳ್ಳವರ ಸಂಘಟನೆಯಾಗಬಹುದು. ಇಂಥ ಧೃವೀಕರಣವನ್ನು ನಾನು ಸ್ವಾಗತಿಸುತ್ತೇನೆ. ಇದೇ ಕಾಲಕ್ಕೆ ನಮ್ಮಂತೆಯೇ ಪ್ರಗತಿಪರ ವಿಚಾರವುಳ್ಳ ಜನರೆಲ್ಲ ನಮ್ಮ ತತ್ವಪ್ರಣಾಲಿಯಲ್ಲಿ ನಂಬುಗೆಯುಳ್ಳವರಿದ್ದರೆ ಅಂಥ ವ್ಯಕ್ತಿಗಳು ಹಾಗೂ ಪಕ್ಷಗಳು ಅವಶ್ಯವಾಗಿ ನಮ್ಮ ಸಂಸ್ಥೆಯಲ್ಲಿ ಸೇರಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಈ ನಮ್ಮ ಮಹಾಸಂಸ್ಥೆಯ ಬಹಿರಂಗ ಅಧಿವೇಶನ ನಡೆದಿರುವ ಈ ಮುಂಬಯಿ ನಗರವು ಐತಿಹಾಸಿಕ ಮಹತ್ವವುಳ್ಳದ್ದಾಗಿದೆ. ಕಾಂಗ್ರೆಸ್ಸು ಹುಟ್ಟಿದ್ದು ಇಲ್ಲಿಯೇ. ದೇಶರತ್ನ ಡಾ॥ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ೧೯೩೫ ನೇ ಇಸ್ವಿಯಲ್ಲಿ ಕಾಂಗ್ರೆಸ್ಸು ಶಾಸನಸಭೆ ಪ್ರವೇಶಿಸಬೇಕೆಂದು ಐತಿಹಾಸಿಕ ನಿರ್ಣಯ ತೆಗೆದುಕೊಂಡಿತು. ಆ ನಂತರ ಮಹಾತ್ಮಾ ಗಾಂಧಿಯವರು ೧೯೪೨ ನೇ ಇಸ್ವಿಯಲ್ಲಿ "ಕ್ವಿಟ್ ಇಂಡಿಯಾ" ಅರ್ಥಾತ್ ಭಾರತದಿಂದ ತೊಲಗಿರಿ ಎಂದು ಬ್ರಿಟಿಶರಿಗೆ ಆಜ್ಞೆ ಮಾಡಿದ್ದು ಈ ನಗರದಿಂದಲೇ. ಅಂದಿನಿಂದ ಕಾಂಗ್ರೆಸ್ಸು ರಾಷ್ಟ್ರದ ಅಪಾರ ಜನಶಕ್ತಿಯ ಪ್ರತಿನಿಧಿಯಾಗಿ ಬ್ರಿಟಿಶರನ್ನು ಹೊಡೆದೋಡಿಸಿ ಸ್ವಾತಂತ್ರ್ಯ ಪಡೆಯಿತು. ೧೯೪೭ರಲ್ಲಿ ಅಧಿಕಾರ ಸ್ವೀಕರಿಸಿದ ಮೇಲೆ ಪಕ್ಷದಲ್ಲಿ ನೆಲೆಗೊಂಡಿದ್ದ ಅಧಿಕಾರವು ಸರಕಾರದ ಕಡೆಗೆ ಹೊರಳಿತು. ಇಲ್ಲಿಯವರೆಗೆ ಜನತೆಯ ಮೇಲೆ ಪಕ್ಷ ಅಧಿಕಾರ ನಡೆಸುತ್ತಿದ್ದಿತು. ಸ್ವಾತಂತ್ರ್ಯ ಬಂದ ಮೇಲೆ ಸರಕಾರ ಅಧಿಕಾರ ನಡೆಸುವ ಪ್ರಸಂಗ ಬಂತು. ಈ ಹೊಂದಾಣಿಕೆ ಸುಲಭವಾಗಿ ಆಗುವಂತಿರಲಿಲ್ಲ, ಈ ಬಗ್ಗೆ ಮತಭೇದ ಬಂದು ಇಬ್ಬರು ಕಾಂಗ್ರೆಸ್ ಅಧ್ಯಕ್ಷರು ತಮ್ಮ ಸ್ಥಾನ ಬಿಟ್ಟುಕೊಟ್ಟರು. ಪಂ॥ ಜವಾಹರಲಾಲರು ಇದ್ದದೆಂದು ಆಗ ಏನೋ ಒಂದು ಏರ್ಪಾಟು ಆಯಿತು. ಆದರೆ ಅದು ಸಂಪ್ರದಾಯವಾಗಿ ಪರಿಣಮಿಸಲಿಲ್ಲ. ಪಂಡಿತಜಿಯವರು ಗತಿಸಿಹೋದ ನಂತರ ಪುನಃ ಪ್ರಶ್ನೆ ತಲೆಯೆತ್ತಿತು. ಪ್ರಧಾನ ಮಂತ್ರಿಯು ಪಾರ್ಲಿಮೆಂಟಿನ ಸದಸ್ಯರ ಪೃತ್ಪೂರ್ವಕ ಮತದಾನದ ಮೇಲೆ ಆರಿಸಿ ಬರಬೇಕೋ ಅಥವಾ ಸಂಸ್ಥೆಯ ಅಧಿಕಾರ ವರ್ಗದವರ ಅನುಮತಿಯನ್ನು ಅನುಸರಿಸಬೇಕೊ ? ಹೀಗಾಗಿ ಸಂಸ್ಥೆಯ ಅಧಿಕಾರ ವರ್ಗವು "ಕಿಂಗ್‌ಮೇಕರ್" ರಾಜ ನಿರ್ಮಾಪಕವಾಗಲು ಯತ್ನಿಸಹತ್ತಿತು. ಇದನ್ನು ತಿಳಿದೇ ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ಸನ್ನು ವಿಸರ್ಜಿಸಿರಿ, ಅವರ ಕಾಲ ಮುಗಿದುಹೋಗಿದೆ ಎಂದು ಹೇಳಿದರೂ ಹಳೇ ಕಾಂಗ್ರೆಸ್ಸೇ ಮಂದುವರಿಯಿತು.ಇಷ್ಟೇ ಅಲ್ಲ ಬ್ರಿಟಿಶರ ಕಾಲದಲ್ಲಿದ್ದ ಆಡಳಿತಾಧಿಕಾರಗಳು ಮತ್ತು ಅಧಿಕಾರ ಚಲಾವಣೆಗಳು ಮುಂದೆ ಸಾಗಿದವು. ಇವೆಲ್ಲವು ನಾವು ಪಡೆದ ಸ್ವಾತಂತ್ರ್ಯವು ಚಿಗುರೊಡೆದು ಬೆಳೆಯದಂತೆ ಹತ್ತಿಕ್ಕಿಬಿಟ್ಟವು.

ನಮ್ಮದು ಇದು ಹೊಸ ಕಾಂಗ್ರೆಸ್ಸು

ನಮ್ಮ ಇಂದಿನ ಕಾಂಗ್ರೆಸ್ಸು ಗಾಂಧಿಜಿಯವರ ವಿಚಾರವನ್ನು ಕೃತಿ ರೂಪದಲ್ಲಿ ತರುವ ಹೊಸ ಕಾಂಗ್ರೆಸ್ಸಾಗಿದೆ. ಅವರು ಹೇಳಿದುದನ್ನೆಲ್ಲ ಅಕ್ಷರಶಃ ತಾರದಿದ್ದರೂ ಅದರ ಆಶಯವನ್ನೇ ಇದು ನೆರವೇರಿಸುತ್ತದೆ. ಏಕೆಂದರೆ ಈ ಅಧಿವೇಶನವು ಯುಗಪರಿವರ್ತನದ ಸಂಕೇತವನ್ನು ಸಾರುತ್ತಲಿದೆ. ೧೯೨೦ ನೇ ಇಸ್ವಿಯಲ್ಲಿ ಕಾಂಗ್ರೆಸ್ಸು ಗಾಂಧಿಜಿ ನೇತೃತ್ವದಲ್ಲಿ ಬಂದಾಗ ಹಳೆಯ ಪರಂಪರೆಗೆ ಹೊಂದಿಕೊಂಡು ಮುಂದುವರಿದರೂ ಹೊಸ ಕಾಂಗ್ರೆಸ್ ಎಂದು ಕರೆಯಲ್ಪಡಹತ್ತಿತು. ಏಕೆಂದರೆ ರಾಜಕೀಯ ಸ್ವಾತಂತ್ರ್ಯ ಪಡೆಯಲು ಅದು ಹೊಸ ತತ್ವಪ್ರಣಾಲಿ ಅನುಸರಿಸಹತ್ತಿತು. ಹಾಗೆಯೇ ಇಂದಿನ ನಮ್ಮ ಕಾಂಗ್ರೆಸ್ಸು ಹಿಂದಿನ ಪರಂಪರೆ ಹಿಡಿದುಕೊಂಡೇ ಹೊಸ ಕಾಂಗ್ರೆಸ್ಸೆಂದು ಕರೆಯಲಡ್ಡಿ ಇಲ್ಲ. ಇಲ್ಲಿಯ ವರೆಗೆ ಕಾಂಗ್ರೆಸ್ಸಿನಲ್ಲಿ ಅದು ದೇಶವ್ಯಾಪಿ ಸಂಸ್ಥೆಯಾದುದರಿಂದ ಬೇರೆ ಬೇರೆ ಹಿತಾಸಕ್ತಿಯುಳ್ಳ ಶಕ್ತಿಗಳು ಒಳಗೇ ತಾಕಲಾಡುತ್ತಿದ್ದವು, ಯುವಕ ಶಕ್ತಿಯು ಕಾಂಗ್ರೆಸ್ಸನ್ನು ಸಬಲಗೊಳಿಸಿ ಶೀಘ್ರವಾಗಿ ನಡೆಸಿ ದೇಶದ ಮಲೆತುನಿಂತ ಬಡತನ, ಆರ್ಥಿಕ ವಿಷಮತೆ ಮುಂತಾದ ಸಮಸ್ಯೆಗಳನ್ನು ಬಿಡಿಸಬೇಕೆಂದು ಹಾತೊರೆಯುತ್ತಿದ್ದಿತು. ಹಾಗಾದರೆ ಒಮ್ಮಿಂದೊಮ್ಮೆ ಪ್ರಬಲ ಪರಿವರ್ತನವಾಗಿ, ಹಳೆಯ ಸಂಪ್ರದಾಯಗಳೆಲ್ಲ ಕೊಚ್ಚಿಕೊಂಡು ಹೋಗಿ ದೇಶವೇ ಗಂಡಾಂತರದ ಮಡುವಿನಲ್ಲಿ ಬೀಳಬಹುದೆಂದು ಸಂಸ್ಥೆಯಲ್ಲಿ ಸೇರಿದ ಇನ್ನೊಂದು ಪ್ರತಿಗಾಮಿ ಶಕ್ತಿ ಹಿಂದಕ್ಕೆ ಎಳೆಯುತ್ತಿದ್ದಿತು. ಈ ಎರಡೂ ಶಕ್ತಿಗಳ ಜಗ್ಗಾಟ ಒಳಗೇ ನಡೆದಿದ್ದರೂ ಅನೇಕ ವರ್ಷಗಳಾದರೂ ನಾವು ಚುನಾವಣೆ ಕಾಲಕ್ಕೆ ಏನೇನು ಮಾಡುವೆವೆಂದು ಭರವಸೆ ಕೊಡುತ್ತಿದ್ದೆವೋ ಅವುಗಳನ್ನು ಕೂಡಾ ಆಚರಣೆಯಲ್ಲಿ ತರಲು ಶಕ್ಯವಾಗಲಿಲ್ಲ. ಕರಾಚಿ, ಲಖನೌ, ಫೈಜಪುರ, ನಾಗಪುರ, ಆವಡಿ, ಭುವನೇಶ್ವರ ಈ ಎಲ್ಲ ಸ್ಥಳಗಳಲ್ಲಿ ಕಾಂಗ್ರೆಸ್ ಅಧಿವೇಶನಗಳು ಜರುಗಿದಾಗ-ನಾವು ವರ್ಷ ವರ್ಷವೂ ಹೆಚ್ಚಿನ ಸಮಾಜವಾದಿ ಕಾರ್ಯಕ್ರಮ ಉದ್ಘೋಷಿಸಿದೆವು. ಆದರೆ ದಿನದಿನಕ್ಕೂ ನಮ್ಮ ದೇಶದ ಆರ್ಥಿಕ ಸ್ಥಿತಿ ಹದಗೆಡುತ್ತಲೇ ಹೋಯಿತು. ಹಾಗಾದರೆ ಗಾಂಧೀಜಿ ತತ್ವಜ್ಞಾನ ಬಿಟ್ಟಿದ್ದಕ್ಕೆ ಈ ಹ್ರಾಸವಾಯಿತೆ ? ಇಲ್ಲ. ನಿಜವಾಗಿ

ನೋಡಿದರೆ ಗಾಂಧೀಜಿಯವರು ಯಾವ ತತ್ವ ಪ್ರಣಾಲಿಯನ್ನೂ ಪ್ರತಿಪಾದಿಸಲಿಲ್ಲ. ಗಾಂಧಿ ಜೀವನ ಮಾರ್ಗವೆಂಬುದು ಮಾತ್ರ ಎಲ್ಲರಿಗೂ ಗೊತ್ತಿದೆ. ಗಾಂಧಿಜಿ ಯಂತ್ರಗಳಿಗೂ ಕೂಡಾ ವಿರೋಧಿಯಾಗಿರಲಿಲ್ಲ. ಜನತೆಯ ಸುಲಿಗೆ ಮಾಡಲು ಮಾತ್ರ ಯಂತ್ರವನ್ನು ಉಪಯೋಗಿಸಬಾರದೆಂದು ಅವರು ಹೇಳುತ್ತಿದ್ದರು. ಸಾಮೂಹಿಕ ಉತ್ಪತ್ತಿ ಮಾಡುವದಕ್ಕಿಂತಲೂ ಜನ ಸಮೂಹದಿಂದಾದ ಉತ್ಪತ್ತಿಯನ್ನು ಅವರು ಪ್ರತಿಪಾದಿಸುತ್ತಿದ್ದರು. ಆರ್ಥಿಕ ಸಮಾನತೆ ಅವರ ತಲೆಯಲ್ಲಿಯೂ ಇದ್ದಿತು, ಅಹಿಂಸಾತ್ಮಕ ಆಡಳಿತ ಭದ್ರವಾಗಿರಲು ಆರ್ಥಿಕ ಸಮಾನತೆ ಇರಬೇಕೆಂದು ಅವರು ಹೇಳುತ್ತಿದ್ದರು, "ಪ್ರತಿಯೊಬ್ಬನ ಕಣ್ಣಿನೊಳಗಿನ ಕಣ್ಣೀರನ್ನು ಒರೆಸುವದೇ ನಮ್ಮ ಕರ್ತವ್ಯ" ಎಂದು ಅವರು ಹೇಳುತ್ತಿದ್ದರು. "ಎರಡನೆಯವರನ್ನು ಬದಲಿಸುವದಕ್ಕಿಂತ ಮೊದಲು ನಾವು ಬದಲಾಗಬೇಕು" ಎಂದು ಅವರು ಪ್ರತಿಪಾದಿಸುತ್ತಿದ್ದರು,

ಗಾಂಧಿ ಮತ್ತು ನೆಹರೂ

ಮಹಾತ್ಮಾ ಗಾಂಧಿಯವರು ಒಂದೆಡೆ ಧನ ಸಂಗ್ರಹವೇ ಸಕಲ ಕಲಹಗಳ ಉಗಮ ಎಂಬುದನ್ನು ಅರಿತಿದ್ದರು. ಆದುದರಿಂದಲೇ ಧನವಂತರು ತಾವು ಸಾದಾ ಜೀವಿಗಳಾಗಿದ್ದು ತಮ್ಮಲ್ಲಿ ಶೇಖರವಾಗುವ ಧನ ಸಂಗ್ರಹದ ಟ್ರಸ್ಟಿಗಳಂತೆ ವರ್ತಿಸಬೇಕೆಂದು ಅವರು ಹೇಳುತ್ತಿದ್ದರು ಗಳಿಸಿದ್ದೇ ಇಸ್ವಿ ಮೇ ತಿಂಗಳದಲ್ಲಿ ಒಮ್ಮೆ ಅವರು ಹೀಗೆಂದರು- "ಸದ್ಯದ ಉಳ್ಳವರ ವರ್ಗವು ಸ್ವಂತ ಪ್ರೇರಣೆಯಿಂದಲೇ ಟ್ರಸ್ಟಿಗಳಾಗಿ ತಮ್ಮ ಸಂಪತ್ತಿನ ಒಡೆತನ ಬಿಟ್ಟು ಕೊಡದಿದ್ದರೆ, ಮುಂದೆ ಬಲವಂತವಾಗಿ ಅವರನ್ನು ಬಿಡಿಸುವ ಸಮಯ ಬರಬಹುದು. ಅಥವಾ ಸರ್ವನಾಶ ಉಂಟಾಗಬಹುದು." ಆದರೆ ಪಂಡಿತಜಿಯವರು ಆ ಕ್ರಮವನ್ನು ಅನುಮೋದಿಸಲಿಲ್ಲ. ಜನರು ಬೇರೆ ಉದಾಹರಣೆ ಹೇಳಿ ತಮ್ಮ ಹತ್ತಿರವೇ ಸಂಪತ್ತನ್ನು ಇಟ್ಟುಕೊಳ್ಳಬಹುದು. ಆರ್ಥಿಕ ವಿಷಯದಲ್ಲಿ ಸರಕಾರವು ಕೈ ಹಾಕಬೇಕಾದುದು ಅತ್ಯವಶ್ಯ ಎಂದು ಅವರು ಘೋಷಿಸಿದರು. ಈಗಾದರೂ ಸಂಪತ್ತನ್ನು ಹೇಗೆ ಉಪಯೋಗಿಸಬೇಕೆಂಬ ಬಗ್ಗೆ ಕಾಯದೆ ಮಾಡುವದು ಪ್ರತಿಯೊಂದು ಕಲ್ಯಾಣ ರಾಜ್ಯದ ಕರ್ತವ್ಯವಾಗಿ ಪರಿಣಮಿಸಿದೆ. ದೇಶದ ಆಸ್ತಿಯು ಬಹುಸಂಖ್ಯಾಕ ಜನರಲ್ಲಿ ವಿತರಣೆಯಾಗಿ

ಬಹು ಪ್ರಮಾಣ ಸಂಗ್ರಹಣದ ಇಳಿತನ್ನು ಮಾಡಬೇಕಿದ್ದರೆ ಅದರ ಮೇಲೆ ನಿರ್ಬಂಧ ಹಾಕಬೇಕಾದುದು ಯುಕ್ತವಾಗಿದೆ. ಆದುದರಿಂದಲೇ ಪ್ರಜಾಪ್ರಭುತ್ವ, ಸಮಾಜವಾದ ಮತ್ತು ಜಾತ್ಯತೀತತೆ ಇವು ಮೂರು ಸದ್ಯದ ಸಮಾಜದ ಅವಶ್ಯಕತೆಗಳಿಂದೂ ಇವುಗಳನ್ನು ಸಾಧಿಸಲು ನಮ್ಮ ದೇಶದ ಯಾವುದೇ ಪಕ್ಷಗಳಾದರೆ, ಅಥವಾ ಕಟ್ಟು ಇಲ್ಲವೆ ಕಾಯದೆ ಅಡ್ಡ ಬಂದರೆ ಅವುಗಳನ್ನು ತೆಗೆದು ಹಾಕಿ ಈ ಧ್ಯೇಯಗಳನ್ನು ಸಾಧಿಸುವುದು ನಮ್ಮ ಕರ್ತವ್ಯವೆಂದೂ ತರುಣ ವರ್ಗದಲ್ಲಿ ನವಶಕ್ತಿಯ ಅರಿವಾಗಿದೆ. ಈ ಕಾರಣದಿಂದಲೇ ಹಳೆಯ ಪ್ರತಿಗಾಮಿ ಶಕ್ತಿಗೂ ನವ ಪುರೋಗಾಮಿ ಶಕ್ತಿಗೂ ಘರ್ಷಣೆಯುಂಟಾಗಿ ಸದ್ಯದ ನವಯುಗದ ಅವತಾರವಾಗಿದೆ.

ಮೂರು ಆಧಾರಸ್ತಂಭಗಳು

ನಾನು ಮೇಲೆ ಹೇಳಿದ ಪ್ರಜಾಪ್ರಭುತ್ವ, ಸಮಾಜವಾದ ಮತ್ತು ಜಾತ್ಯತೀತತೆ ಇವು ಮೂರು ನಮ್ಮ ರಾಜಕೀಯದ ಆಧಾರ ಸ್ತಂಭಗಳಾಗಿವೆ. ಈ ಸ್ತಂಭಗಳ ಮೇಲೆಯೇ ನಮ್ಮ ಕಾಂಗ್ರೆಸ್ಸು ನಿಂತಿದೆ, ಅತ್ಯಂತ ಪ್ರಾಚೀನ ಪದ್ಧತಿಯನ್ನು ಅನುಸರಿಸಿದ ಮತ್ತು ತೀರಾ ಹಿಂದುಳಿದ ಬಹುಸಂಖ್ಯಾಕ ಜನರುಳ್ಳ ನಮ್ಮ ದೇಶದಲ್ಲಿ ಸಮಾಜವಾದವಿಲ್ಲದ ಪ್ರಜಾಪ್ರಭುತ್ವವೆಂದರೆ "ಉಳ್ಳವರಿಂದ ಉಳ್ಳವರಿಗಾಗಿ ಉಳ್ಳವರ" ಪ್ರಭುತ್ವವಾಗಿ ಪರಿಣಮಿಸುವದು. ಹಾಗೆಯೇ ಜಾತ್ಯತೀತತೆಯನ್ನು ಬಿಟ್ಟರೂ ನಡೆಯಲಾರದು. ಜಾತ್ಯತೀತತೆ ಅಂದರೆ ಮಹಾತ್ಮಾ ಗಾಂಧಿಯವರ ದೃಷ್ಟಿಯಲ್ಲಿ ಜಾತಿಭೇದ ಮಾಡಬಾರದೆಂದಷ್ಟೇ ಇರಲಿಲ್ಲ, ಅಥವಾ ಎಲ್ಲ ಧರ್ಮಗಳೂ ಸಮಾನವೆಂದು ತಿಳಿಯಬೇಕು ಎಂಬುದಷ್ಟಕ್ಕೇ ಅದು ಸೀಮಿತವಾಗಿರಲಿಲ್ಲ, ಗಾಂಧಿಜಿಯವರ ಜಾತ್ಯತೀತತೆ ಸಕಲ ಮಾನವರ ಪ್ರೇಮ. ಜಗತ್ತಿನ ಯಾವದೇ ಮೂಲೆಯಲ್ಲಿ ಯಾವದೇ ಮಾನವ ಜನ ಸಮೂಹಕ್ಕೆ ನೋವಾದರೂ ಅವರಿಗೆ ನೋವಾಗುತ್ತಿದ್ದಿತು. ಈ ಭಾವನೆ ನಮಗೆ ಹೊಸದೇನೂ ಅಲ್ಲ, ಅಥವಾ ಪಾಶ್ಚಾತ್ಯರಿಂದ ಎರವಲು ಪಡೆದದ್ದೂ ಇದಲ್ಲ. ಪಾಶ್ಚಾತ್ಯರ ಪ್ರಜಾಪ್ರಭುತ್ವದ ಸಮಾಜವಾದದಲ್ಲಿ ಮನುಷ್ಯನು ಜನ್ಮತಃ ಅನ್ಯರಿಗೆ ವರ್ಗಾಯಿಸಲಿಕ್ಕೆ ಬಾರದಂತಹ ಕೆಲವೊಂದು ಹಕ್ಕುಗಳನ್ನು ಪಡೆದುಕೊಂಡು ಬಲಿಷ್ಠನಾಗಿದ್ದಾನೆ ಎಂಬ

ತತ್ವವು ಅಡಕವಾಗಿದೆ. ಆ ತತ್ವದ ಅರಿವಿನಿಂದಲೇ ಅವರ ಸಮಾಜವು ಪ್ರಗತಿ ಶೀಲವಾಗಿದೆ. ಮಾನವನು ದೇವಾಂಶವೆಂದು ಭಾರತವು ತಿಳಿದರೂ ಆವನ ಪ್ರತ್ಯೇಕ ಪಂತಗಳನ್ನು ರಚಿಸಿದ್ದರಿಂದ ಮಾನವತೆಯ ಭಾವನೆ ಕಡಿಮೆ ಯಾಗಿ ನಾವು ಹೀನ ಸ್ಥಿತಿಗೆ ಮುಟ್ಟಿದ್ದೇವೆ. ಈಗ ನಾವು ಪಾಶ್ಚಾತ್ಯ ಪೌರ್ವಾತ್ಯ. ಎರಡೂ ತತ್ವಜ್ಞಾನಗಳನ್ನು ನಮ್ಮ ಪ್ರಜಾಪ್ರಭುತ್ವ ಸಮಾಜ ವಾದದಲ್ಲಿ ಅಳವಡಿಸಿಕೊಂಡಿರುವುದರಿಂದ ಉಳಿದ ಜಾತೀಯವಾದಿ ಛಿಥವಾ ಸಾಮ್ಯವಾದಿಗಳಿಗಿಂತ ಎಷ್ಟೋ ಮೇಲಾದ ತತ್ವಾವಲಂಬಿಗಳಾಗಿದ್ದೇವೆ.

ಸಂಪತ್ತು ಹಿಗ್ಗಿದೆ, ಮನುಷ್ಯ ಕುಗ್ಗಿದ್ದಾನೆ

ನಮ್ಮ ಈಗಿನ ಪರಿಸ್ಥಿತಿ ಹೇಗಿದೆ ? ನಮ್ಮಲ್ಲಿ ಸಂಪತ್ತೇನೋ ಬೆಳೆ ದಿದೆ. ಆದರೆ ಅದು ದೇಶದ ಮೇಲ್ತರಗತಿ ಜನರಿಗಷ್ಟೇ ಮುಟ್ಟಿದೆ. ಸಂಪತ್ತು ಹಿಗ್ಗಿದೆ ಮನುಷ್ಯನು ಕುಗ್ಗಿದ್ದಾನೆ. ಫಿಲಿಪಾಯಿನ್ ದ್ವೀಪದ ಒಬ್ಬ ಪ್ರೊಫೆಸರರು ಮೊನ್ನೆ ನನಗೆ ಹೀಗೆಂದರು- "ಇಲ್ಲಿ ನೂರಾರು ಹೆಣ್ಣು ಮಕ್ಕಳು ಹರಕು ಚಿಂದಿಗಳನ್ನುಟ್ಟು ಅಡ್ಡಾಡುತ್ತಿದ್ದು ಇಲ್ಲಿಯೇ ನಾಗರಿಕ ಸ್ತ್ರೀಯರು ನೂರಾರು ರೂಪಾಯಿ ಬೆಲೆ ಬಾಳುವ ಸೀರೆಗೆಳನ್ನುಟ್ಟು ಸಂಚರಿ ಸುತ್ತಿದ್ದಾರೆ. ನಿಮ್ಮಲ್ಲಿ ಈ ಬಗ್ಗೆ ಕ್ರಾಂತಿ ಏಕೆ ಆಗಿಲ್ಲ ?" ನಮ್ಮ ದೇಶದ ಕೋಟ್ಯಾಂತರ ಜನರು ಹೊಟ್ಟೆತುಂಬ ತಿನ್ನಲಿಕ್ಕೆ ಗತಿ ಇಲ್ಲದೆ ಇದ್ದಾರೆ. ನಮ್ಮ ವಾರ್ಷಿಕ ಸರಾಸರಿ ಉತ್ಪನ್ನ ವರ್ಷಕ್ಕೆ ೩೦೦ ರೂ. ಇದ್ದರೆ ಈ ಬಡವರಿಗೆ ಅದರ ಅರ್ಧದಷ್ಟು ಕೂಲಿ ಸಹ ವರ್ಷಕ್ಕೆ ದೊರೆಯುವದಿಲ್ಲ. ಒಕ್ಕಲಿಗರ ಸ್ಥಿತಿಯೂ ಇದಕ್ಕಿಂತ ಉತ್ತಮವಿಲ್ಲ. ನೂರಕ್ಕೆ ೪೭ ರಷ್ಟು ಒಕ್ಕಲಿಗರು ಒಂದೇ ಒಂದು ಎಕರೆ ಮಾತ್ರ ಹಿಡುವಳಿಯುಳ್ಳವರಿದ್ದಾರೆ. ಇನ್ನು ನೂರಕ್ಕೆ ೨೨ ರಷ್ಟು ಜನ ಒಕ್ಕಲತನದ ಕೂಲಿ ಮಾಡುವವರಿಗೆ ಭೂಮಿಯೆ ಇಲ್ಲ. ಕೇವಲ ನೂರಕ್ಕೆ ೩ ಛಿಥವಾ ೪ ರಷ್ಟು ಜನರು ಎಲ್ಲಾ ಭೂಮಿಗಳಿಗೆ ಒಡಯರಾಗಿ ಸರಕಾರಿ ಆಡಳಿತ ಅಧಿಕಾರಿಗಳೊಡನೆ ಕೂಡಿ ಕೊಂಡು ತಮ್ಮ ಪ್ರಭಾವ ಬೀರುತ್ತ ಅಧಿಕಾರ ನಡೆಸುತ್ತಿದ್ದಾರೆ, ಸರಕಾರಿ ಸಂಪನ್ಮೂಲಗಳೆಲ್ಲ ಅವರ ಸೊತ್ತಾಗಿವೆ. ಅಂದ ಮೇಲೆ ಹಿಂಸೆಗೆ ಆಮಂತ್ರಣ ಕೊಡುವವರು ಯಾರು ? ನೀವೇ ಯೋಚಿಸಿರಿ. ಗಾಂಧಿಜಿ ವಿಚಾರಸರಣಿ

ಯಂತೆ– "ನಾವು ಬಂಧನದಲ್ಲಿರುವುದು ಬ್ರಿಟಿಶರ ತೋಳುಗಳಿಂದ ಅಲ್ಲ; ನಮ್ಮ ಕುಂದುಕೊರತೆಗಳ ಮೂಲಕ" ಎಂಬ ವಾಕ್ಯದಂತೆ ಜನತೆಯ ಅಹವಲ್ಲಿಯೂ ಹಳ್ಳಿಗಾಡಿನ ಜನತೆಯ ಈ ದಾರಿದ್ರ್ಯವೇ ಹಿಂಸೆಯಿಂದ ಸಮಾಸ್ಯೆ ಬಿಡಿಸಬೇಕೆನ್ನುವವರನ್ನು ಕೈ ಮಾಡಿ ಕರೆಯುತ್ತಿದೆಯೆಂದು ಹೇಳ ಬಹುದು. ಈ ಪ್ರಥಮ ಸತ್ಯವು ನಮಗೆ ಮನದಟ್ಟಾದರೆ ಈ ಆಪತ್ತನ್ನು ನಿವಾರಿಸಲು ನಾವು ಎಂಥ ಹೊಣೆ ಹೊರಬೇಕಾಗಿದೆ ಯೆಂಬುದರ ಅರಿವು ಆಗದಿರದು.

ಒಕ್ಕಲುತನ ಸಮಸ್ಯೆಯೊಂದೇ ನಮ್ಮನ್ನು ಕಾಡುತ್ತಿಲ್ಲ. ಪಂಚವಾರ್ಷಿಕ ಯೋಜನೆ ಕಾಲಕ್ಕೆ ಕೆಲವೊಂದು ಜನರಲ್ಲಿ ಆ ದುಡ್ಡು ಹರಿದು ಬಂದು ನಮಗೆ ತಿಳಿದೊ ತಿಳಿಯದೆಯೋ ಅಪಾರ ಸಂಗ್ರಹವಾಗಿ ಬಿಟ್ಟಿದೆ. ಯುಕ್ತಿ ಪ್ರಯುಕ್ತಗಳಿಂದ ಅವರು ಕೋಟ್ಯಾಂತರ ರೂಪಾಯಿ ಗಳಿಸಿಕೊಂಡಿದ್ದಾರೆ. ಇವರು ಅತ್ಯಂತ ದುಂದುವೆಚ್ಚದ ಜೀವನ ನಡೆಸುವದಲ್ಲದೆ ನಮ್ಮ ಈ ಸಮಾಜವಾದವನ್ನೇ ಹೀನಾಯವಾಗಿ ಕಾಣುತ್ತಿದ್ದಾರೆ. ಸರಕಾರದ ಈ ಯೋಜನೆ ಕಂಟ್ರೋಲು ಹೋಗಿ ವೈಯಕ್ತಿಕ ಸಂಪಾದನೆಯ ಕಾಲ ಬರಲೆಂದು ಅವರು ನಿರೀಕ್ಷಿಸುತ್ತಿದ್ದಾರೆ. ಸರಕಾರದವರು ಇವರ ಬಗ್ಗೆ ಎಷ್ಟೇ ಕ್ರಮವನ್ನು ಕೈಕೊಂಡರೂ ಇವರನ್ನು ಬಗ್ಗುಬಡಿಯುವುದು ಸಾಧ್ಯವಾಗಿಲ್ಲ ವೆಂದು ತಿಳಿಸಲು ವಿಷಾದವೆನಿಸುತ್ತದೆ. ಇವರನ್ನು ನಿಯಂತ್ರಿಸದಿದ್ದರೆ ಸಮಾಜ ವಾದಕ್ಕೆ ಉಳಿಗಾಲವೇ ಇಲ್ಲ.

ಈಗೇನು ಮಾಡಬೇಕು ?

ಇಂಥ ಭೀಕರ ಪರಿಸ್ಥಿತಿಯಲ್ಲಿ ನಾವೇನು ಮಾಡಬೇಕು? ನಾವು ಮೂಲ ದಿಂದಲೇ ಸುಧಾರಣೆ ಪ್ರಾರಂಭಿಸಬೇಕು. ನಮ್ಮ ಒಕ್ಕಲುತನ ಮತ್ತು ಹಳ್ಳಿ ಗಾಡಿನ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ತೊಡಗಬೇಕು. ಹಳ್ಳಿಯಲ್ಲಿ ಈಗ ಉತ್ಪಾದಿಸುವವರು ಮಧ್ಯಮ ವರ್ಗದ ಒಕ್ಕಲಿಗರಾಗಿದ್ದು ಹೊಲವಿಲ್ಲದ ಕೂಲಿಯವರಿಗಾಗಲಿ ಅಥವಾ ಚಿಕ್ಕ ಹಿಡುವಳಿದಾರರಿಗಾಗಲಿ ಸ್ಥಾನವೇ ಇಲ್ಲ. ಪೂರ್ವದಲ್ಲಿ ಯಾವ ಜಾತಿಯವರು ಹಳ್ಳಿಗಳಲ್ಲಿ ತಮ್ಮ ಅಧಿಕಾರ ನಡೆಸುತ್ತಿದ್ದಾರೆಯೋ ಅವರೇ ಈಗಲೂ ಸುಸ್ಥಿತಿಯಲ್ಲಿ ಇದ್ದಾರೆ. ಹಳೆಯ ಜಮೀನು

ದಾರರೇ ಈಗ ಒಕ್ಕಲಿಗರಾಗಿ ಹಳ್ಳಿಗಳನ್ನು ಆಳುತ್ತಿದ್ದಾರೆ. ಸರಕಾರಿ ಆಡಳಿತ ವರ್ಗವು ಈ ಹಳೆಯ ಜಮೀನುದಾರರಿಗೇನೇ ಬೆಂಬಲಿಗಾಗಿ ಇಲ್ಲವೆ ಅಡಿವರ್ಗವಾಗಿ ನಡೆಯುತ್ತಿದೆ. ಇದೆಲ್ಲವೂ ಬದಲಾಗಬೇಕು. ಹಳ್ಳಿಗಳಲ್ಲಿ ಹೊಸ ಮುಂದಾಳುತನವು ತಲೆದೂಗಬೇಕು. ಹಳ್ಳಿಯ ಮಟ್ಟದಲ್ಲಿ ವಿಶ್ವಾಸಾತ್ಮಕ ಘಟಕಗಳನ್ನು ನಾವು ನಿರ್ಮಿಸಬೇಕು. ಈ ವಿಶ್ವಾಸಾತ್ಮಕ ಘಟಕದಲ್ಲಿ ಸ್ಥಾನಿಕ ಜನರಿದ್ದು ಅಭಿವೃದ್ಧಿ ಕಾರ್ಯದಲ್ಲಿ ಅವರು ಆತ್ಮಾರ್ಪಣೆ ಮಾಡಿದಂಥವರಾಗಿರಬೇಕು. ಈ ಘಟಕವೆಂದರೆ ಹಳ್ಳಿಯವರೇ ಆದ ಹಾಗೂ ಹಸಿವೆಯಿಂದ ಬಳಲುತ್ತಿದ್ದು ದುಡಿಯಬೇಕೆನ್ನುವವರ ವಿಶ್ವಾಸಕ್ಕೆ ಪಾತ್ರರಾದ ಹಳ್ಳಿ ನಿವಾಸಿಗಳೇ ಆಗಿರಬೇಕು. ಆದ್ದರಿಂದ ಭೂಸುಧಾರಣೆ ತೀವ್ರ ಜಾರಿಯಲ್ಲಿಬಂದು ಹೆಚ್ಚು ಉತ್ಪತ್ತಿ ಬೆಳೆಯುವಂತೆ ಮಾಡಬೇಕು. ಉಳುವವನಿಗೇ ಹೊಲಕೊಡುವದಲ್ಲದೆ ಸರಕಾರೀ ವಶದಲ್ಲಿದ್ದ ಭೂಮಿಯನ್ನು ಹೊಲವಿಲ್ಲದವರಿಗೆ ತೀವ್ರವೇ ಹಂಚಬೇಕು. ಈ ಹೊಲಗಳನ್ನು ಸಾಗುಮಾಡಲು ದುಡ್ಡು ಇಲ್ಲದವರಿಗೆ ಸಾಲ ಕೊಡಲು ಸರಕಾರ ಒಂದು ಯೋಜನೆ ಮಾಡಬೇಕು. ಹೀಗಾದರೆ ಅವರು ಸ್ವಾವಲಂಬನದ ಉದ್ಯೋಗ ಕೈಕೊಳ್ಳಲು ಅನುಕೂಲವಾಗುವದು. ಹಾಗು ಹಳ್ಳಿಗಳಲ್ಲಿ ಇಂಥ ಸೌಕರ್ಯ ದೊರೆಯಹತ್ತಿದರೆ ಪಟ್ಟಣಕ್ಕೆ ನೌಕರಿ ಹುಡುಕಲು ಹೋದಂಥ ಜನರು ಕೂಡಾ ಹಳ್ಳಿಗೆ ಬಂದು ಸ್ವಾವಲಂಬನ ಉದ್ಯೋಗಕ್ಕೆ ಕೈಹಾಕಬಹುದು.

ಒಮ್ಮೆ ಇಂಥ ಕೆಳಮಟ್ಟದ ಜನರಿಗೆ ಉದ್ಯೋಗ ದೊರೆಯಲಿಕ್ಕೆ ಹತ್ತಿದರೆ ಅವರು ಭಾಂಡವಲ ಬೆಳೆಸಿಕೊಂಡು ಒಂದು ಯೋಗ್ಯತೆಯ ಮಟ್ಟಕ್ಕೆ ಬರುವರು. ಮತ್ತು ಸಮಾಜದಲ್ಲಿ ಸ್ವಾಭಿಮಾನದಿಂದ ತಲೆಯೆತ್ತಿ ನಡೆಯಲು ಕಲಿಯುವರು, ಯಾವ ಕೋಟ್ಯಾಂತರ ಜನರು ಈಗ ದುಡಿಯಲು ಏನೂ ಸಾಧನವಿಲ್ಲದೆ ನಿರ್ಗತಿಕರಾಗಿ ಸಮಾಜಕ್ಕೊಂದು ಭಾರವಾಗಿ ಪರಿಣಮಿಸಿದ್ದಾರೆಯೊ ಅವರಿಗೆಲ್ಲ ಉದ್ಯೋಗ ದೊರೆತು ರಾಷ್ಟ್ರೀಯ ಉತ್ಪತ್ತಿಯಲ್ಲಿ ನಿಜವಾದ ಪಾಲುಗಾರರಾಗುವರು.

ಈ ರೀತಿ ಒಮ್ಮೆ ಈ ವಿಶ್ವಾಸಾರ್ಹ ಘಟಕ ಸ್ಥಾಪನವಾಗಿ ಹಳ್ಳಿಯ ಜನರಿಗೆ ಹೋರೆ ದೊರೆತದ್ದಾದರೆ ಅವರನ್ನು ಉತ್ತೇಜಿಸಿಗೊಳಿಸಲಿಕ್ಕೆ ಸಹಕಾರಿ ಸಂಘ, ಸಹಕಾರಿ ಒಕ್ಕಲುತನ, ಉತ್ತಮ ಬೀಜಗಳು, ನೀರಾವರಿ, ಗೊಬ್ಬರ, ಧಾರಣೆ ನಿಯಂತ್ರಣ, ಧಾನ್ಯ ಸಂಗ್ರಹ ಗೊಡೌನ, ಪಶಂಸಂಗೋ

ಪನ, ಕೋಳಿ ಸಾಕುವಿಕೆ ಇತ್ಯಾದಿ ವಿಧವಿಧ ಕಾರ್ಯಗಳನ್ನು ಹೆಚ್ಚಿಸಲು ಸಾಧ್ಯವಾಗುವದು. ಈ ರೀತಿ ಜನರು ತಮ್ಮ ಆರ್ಥಿಕ ಸ್ಥಿತಿ ಉತ್ತಮಗೊಳಿಸಿಕೊಂಡಲ್ಲಿ ಹಳ್ಳಿ ಪಂಚಾಯತಿಗಳನ್ನು ಉತ್ತಮಗೊಳಿಸಿ ಜನರ ನಿಜವಾದ ಪ್ರತಿನಿಧಿಯಾಗುವಂತೆ ಮಾಡಲು ಬರುವದು. ಹಿಂದಕ್ಕೆ ಪಂಚಾಯತಿಗಳು ಪರಿಪೂರ್ಣವಾಗಿದ್ದು ತಮ್ಮ ಪರಿಪೂರ್ಣತೆಯನ್ನು ಕಾಯ್ದುಕೊಂಡಿದ್ದವು. ಆದರೆ ಆಗ ಜನರ ಬೇಡಿಕೆಗಳು ಬೆಳೆದಿರಲಿಲ್ಲ. ಬಡವರು ಕೂಡಾ ಬಡವರಾಗಿಯೇ ಇರಲು ಸಂತೋಷ ಪಡುತ್ತಿದ್ದರು. ಈಗ ಪರಿಸ್ಥಿತಿ ಬೇರೆಆಗಿದೆ. ಎಲ್ಲ ಜನರೂ ಈಗ ಸಮಾನರೆಂಬ ಭಾವನೆ ಬಂದಿದೆ. ಅಂದಮೇಲೆ ಸಮಾನತೆಯ ತಳಹದಿಯ ಮೇಲೆಯೇ ಸಹಕಾರ ಸಹ ಜೀವನ ನಡೆಸಲು ಈಗಿನ ಜನರು ಬಯಸುತ್ತಾರೆ. ಸಂಪತ್ತು ಗಳಿಸುವ ಸಾಧನವುಳ್ಳ ಮನುಷ್ಯ ಮತ್ತು ಏನೂ ಸಾಧನವಿಲ್ಲದೆ ಉಪವಾಸ ಬೀಳುವ ಮನುಷ್ಯ ಇವರಲ್ಲಿ ಸಹಕಾರವುಂಟಾಗುವದು ಸಾಧ್ಯವೇ? ಚಿಕ್ಕ ಹಿಡುವಳಿದಾರ ಮತ್ತು ದೊಡ್ಡದೊಡ್ಡ ಹಿಡುವಳಿದಾರರಲ್ಲಿ ಭೇದವಿರುವಂತೆಯೇ ಒಣಬೇಸಾಯ ಮತ್ತು ನೀರಾವರಿ ಬೇಸಾಯ ಮಾಡುವವರಲ್ಲಿಯೂ ಆರ್ಥಿಕ ವ್ಯತ್ಯಾಸ ತಲೆದೋರಿದೆ.

ಸಾಮ್ಯವಾದಕ್ಕಿಂತ ಹೆಚ್ಚು ಗಂಡಾಂತರದ್ದು

ಇಲ್ಲಿಯ ವರಗೆ ನಮ್ಮ ಸಹಕಾರಿಗಳಾಗಿದ್ದವರು ಸಾಮ್ಯವಾದ (ಕಮ್ಯುನಿಸಂ) ದ ಗಂಡಾಂತರವನ್ನು ಬಹಳೇ ದೊಡ್ಡದು ಮಾಡಿ ಹೇಳುತ್ತಿದ್ದಾರಷ್ಟೆ. ಆದರೆ ಜಾತೀಯವಾದವು ಅದಕ್ಕಿಂತಲೂ ಹೆಚ್ಚು ಗಂಡಾಂತರಕಾರಿಯಾಗಿದೆ. ಏಕೆಂದರೆ ಅದು ನಮ್ಮ ಸಮಾಜದ ರೋಮರೋಮಗಳಲ್ಲಿ ವಿಸ್ತಾರವಾಗಿ ವ್ಯಾಪಿಸಿಕೊಂಡಿದೆ. ನಮ್ಮ ಸಮಾಜ ರಚನೆ, ನಮ್ಮ ವರ್ತನೆ, ನಂಬುಗೆ, ಜಾತಿಜಾತಿಗಳಲ್ಲಿ ಕಂಡು ಬರುವ ತಾರತಮ್ಯ, ಇಷ್ಟೇ ಏಕೆ ಪ್ರದೇಶ ಪ್ರದೇಶದಲ್ಲಿ ವೈಷಮ್ಯ, ಧರ್ಮಧರ್ಮದಲ್ಲಿ ವೈಷಮ್ಯ ಇವೆಲ್ಲ ವಿಷಮತೆಗಳು ಕೂಡಿ, ರಾಷ್ಟ್ರಕ್ಕೆ ಪ್ರಚಂಡ ಗಂಡಾಂತರವನ್ನುಂಟುಮಾಡಿವೆ. ಇವೆಲ್ಲಾ ವಿಷಮತೆಗಳು ಬ್ರಿಟಿಶರು ಆಳುತ್ತಿರುವಾಗ ಮುದುಡಿಕೊಂಡು ಒಳಗೇ ಇದ್ದವು. ಈ ವಿಷಮತೆಗಳ ಲಾಭ ಪಡೆದೇ ವಿದೇಶೀಯರು ನಮ್ಮ ಮೇಲೆ ಆಳಿದರು. ಈಗ ಈ ವಿಷಮತೆ ಹೋಗಬೇಕಾದರೆ ನಮ್ಮ ವಿಚಾರ ಸರಣಿಯೇ ಬದಲಾಗಬೇಕು.

ನಾವು ಸಂಪ್ರದಾಯದ ವಿಚಾರ ಸರಣಿ ಬಿಟ್ಟು ಆಧುನಿಕ ಸಶಾಸ್ತ್ರೀಯ ವಿಚಾರ ಸರಣಿಯುಳ್ಳವರಾಗಬೇಕು. ಗಾಂಧೀಜಿಯವರು ತಮ್ಮ ದೃಷ್ಟಿಯಲ್ಲಿ ಯಾವ ಧ್ಯೇಯವಸ್ತು ಇರಿಸಿಕೊಂಡಿದ್ದರೋ ಅಂಥ ನೂತನ ಮನುಷ್ಯರಾಗುವಂತೆ ನಾವು ಪರಿವರ್ತನವಾಗಬೇಕು. ಈ ಉದಾರ ಕಾರ್ಯಕ್ಕಾಗಿ ಪ್ರತಿಯೊಬ್ಬ ಕಾಂಗ್ರೆಸ್ಸಿಗನು ತನ್ನನ್ನು ಅರ್ಪಣ ಮಾಡಿಕೊಳ್ಳಬೇಕು. ಈ ಮಾನಸಿಕ ಕ್ರಾಂತಿಯಾಗುವ ದೃಷ್ಟಿಯಿಂದ ರಾಜಕೀಯಕ್ಕೆ ಸಂಬಂಧ ಪಡದಂಥ ಸಮಾಜ ವಿಜ್ಞಾನ ತಜ್ಞರಾದ ಕೆಲವೊಂದು ಜನರು ಕೂಡಿ ಈ ಬಗ್ಗೆ ಆಲೋಚನೆ ಮಾಡಿ ಪ್ರಚಾರ ಮಾಡುವ ಕುರಿತು ನಾನು ಎ. ಐ. ಸಿ. ಸಿ. ಯಲ್ಲಿ ಒಂದು ಪ್ರತ್ಯೇಕ ವಿಭಾಗವನ್ನು ಸ್ಥಾಪಿಸಲು ಸಲಹೆ ಕೊಡುತ್ತಿದ್ದೇನೆ. ಇದೇ ಮೇರೆಗೆ ಇನ್ನು ಮುಂದೆ ಹೊಸ ಊರು ಕಟ್ಟುವಾಗ ಇಲ್ಲವೆ ಹೊಸ ಮನೆ ಕಟ್ಟುವಾಗ ಪ್ರತ್ಯೇಕ ಜಾತಿಗೆ ಪ್ರತ್ಯೇಕ ವಿಭಾಗ ಎಂದು ಮಾಡದೆ ಮಿಶ್ರ ನಿವಾಸಸ್ಥಾನಗಳಿರಬೇಕೆಂದು ನಾನು ಸೂಚಿಸುತ್ತೇನೆ. ಇದೇ ರೀತಿ ಎಲ್ಲ ಜಾತಿಯವರು ಕೂಡಿಯೇ ಹಬ್ಬಗಳನ್ನು ಆಚರಿಸಿದರೆ ಸಂಘಟನೆಗೆ ಅನುಕೂಲವಾಗುವದು.

ಮಾತೃ ಭಾಷೆ – ರಾಷ್ಟ್ರ ಭಾಷೆ

ಪ್ರಜಾಪ್ರಭುತ್ವವು ಜನತೆಯಲ್ಲಿ ಪರಿಣಾಮಕಾರಿಯಾಗಿ ಬೇರೂರಬೇಕಾದರೆ ಅವರು ಪರಸ್ಪರ ಸಮಾನತೆ ತಳಹದಿಯ ಮೇಲೆ ರಾಜಕೀಯ, ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲುಗೊಳ್ಳುವಂತಾಗಬೇಕೆಂದು ೧೯೧೭ ನೇ ಇಸ್ವಿ ಕಾಲಕ್ಕೇನೇ ಗಾಂಧಿಜಿಯವರು ಆಲೋಚಿಸಿದ್ದರು. ಈ ರೀತಿ ಸರ್ವ ಜನರು ಸೇರಬೇಕಾದರೆ ಒಂದೇ ಭಾಷೆಯ ಅಗತ್ಯವಿದೆಯೆಂದು ತಿಳಿದು ರಾಜ್ಯಕ್ಕೊಂದು ಪ್ರಮುಖ ಭಾಷೆ ಇರಬೇಕೆಂದು ಭಾಷಾವಾರು ರಾಜ್ಯ ಕಲ್ಪನೆ ಒಳಗೊಂಡಿತು. ಕಾಂಗ್ರೆಸ್ಸು ಕೂಡಾ ಭಾಷಾವಾರು ಪ್ರದೇಶ ಕಾಂಗ್ರೆಸ್ ಕಮೀಟಿಗಳನ್ನು ಸ್ಥಾಪಿಸಿತು. ರಾಜ್ಯ ಪುನರ್ಘಟನಾ ಆಯೋಗವು ಭಾಷಾವಾರು ರಾಜ್ಯ ನಿರ್ಮಾಣ ಮಾಡಿದಾಗ ಕೂಡ ಮಾತೃಭಾಷೆಯಲ್ಲಿಯೇ ಸಂಪೂರ್ಣ ರಾಜಕೀಯ ವ್ಯವಹಾರ ನಡೆದು ಆಯಾ ಭಾಷೆಗಳು ಉರ್ಜಿತವಾಗಲಿ ಎಂಬ ಉದ್ದೇಶವಿದ್ದಿತು. ಅವುಗಳ ಜೊತೆಗೆ ಪರಸ್ಪರ ಮಾತುಕತೆ

ನಡೆಸಲು ರಾಷ್ಟ್ರಭಾಷೆ ಹಿಂದಿ ಇರಬೇಕೆಂದು ಗಾಂಧಿಜಿ ಹೇಳಿದರು. ಒಂದೊಂದು ರಾಜ್ಯಕ್ಕೆ ಒಂದೊಂದು ರಾಜ್ಯ ಭಾಷೆ ಇದ್ದಂತೆ ಹಿಂದಿಯು ಯಾವುದೇ ರಾಜ್ಯದ ಸೀಮಿತ ಭಾಷೆಯಾಗಿಲ್ಲ. ಉತ್ತರ ಭಾರತದಲ್ಲಿ ಜನರು ತಮ್ಮ ತಮ್ಮ ಭಾಷೆಗಳಾದ ರಾಜಸ್ಥಾನಿ, ಹಿಮಾಚಲಿ, ಬ್ರಜ ಭಾಷಾ, ಜಿಧಿ, ಭೋಜಪುರಿ, ಮೈಥಿಲಿ ಮೊದಲಾದವುಗಳನ್ನು ತಮ್ಮ ಮನೆಗಳಲ್ಲಿಯೇ ಮಾತನಾಡುತ್ತಿದ್ದು ಹೊರಗೆ ಸರಕಾರಿ ಕೆಲ್ಸಗಳಲ್ಲಿ ಹಿಂದಿಯನ್ನು ಬಳಸುತ್ತಾರೆ.ಹಿಂದಿ ಈ ರೀತಿ ಎಲ್ಲರ ಭಾಷೆಯೂ ಹೌದು; ಎಲ್ಲರ ಭಾಷೆಯೂ ಅಲ್ಲ. ಅದು ಅತ್ಯಂತ ಸುಲಭ ಭಾಷೆಯಾಗಿದ್ದು ಹಿಂದುಸ್ಥಾನದ ಮುಕ್ಕಾಲು ಪಾಲು ಜನರು ಆ ಭಾಷೆ ಆಡುತ್ತಾರೆ. ಬಂಗಾಲಿ, ಉರಿಯಾ, ಆಸಾಮಿ, ಮರಾಠಿ ಪಂಜಾಬಿ, ಗುಜರಾಥಿ ಭಾಷೆಗಳೊಡನೆ ಅದರ ಪ್ರತ್ಯಕ್ಷ ಸಂಬಂಧವಿದ್ದು ಉಳಿದ ಭಾಷೆಗಳೊಡನೆ ಅಪ್ರತ್ಯಕ್ಷ ಸಂಬಂಧವಿದೆ. ದಕ್ಷಿಣ ಭಾರತದಲ್ಲಿ ಸಾವಿರಾರು ವಿದ್ಯಾರ್ಥಿಗಳು ಹಿಂದಿ ಕಲಿತು ರಾಜ್ಯ ಘಟನೆಯಲ್ಲಿ ಅದು ರಾಷ್ಟ್ರಭಾಷೆಯೆಂದು ನಿರ್ಣಯವಾಗುವ ಪೂರ್ವದಲ್ಲಿಯೇ ಪಾರಂಗತರಾಗಿದ್ದಾರೆ. ಇಷ್ಟರಲ್ಲೇ ಅದು ಸ್ವಯಂಸ್ಫೂರ್ತಿಯಿಂದ ರಾಷ್ಟ್ರಭಾಷೆಯೆಂದು ಸ್ವೀಕರಿಸಲ್ಪಡುತ್ತಿದ್ದಿತು. ಆದರೆ ಭಾಷೆಯ ಪ್ರಶ್ನೆಯಲ್ಲಿ ಬೇರೆ ಪ್ರಶ್ನೆಗಳು ಆಡಕವಾಗಿದ್ದರಿಂದ ಹಿಂದಿಯ ಬಗ್ಗೆ ಒಡಕುಂಟಾಯಿತು. ಈಗ ತ್ರಿಭಾಷಾ ಸೂತ್ರ ರಚಿಸಿದ್ದರಿಂದ ಮತ್ತು ಆಫೀಸ ಭಾಷೆಯ ಕಾಯದೆಯಲ್ಲಿ ತಿದ್ದುಪಡಿ ಸ್ವೀಕರಿಸಿದ್ದರಿಂದ ಹಿಂದಿ ಪ್ರಚಾರದ ಬಗ್ಗೆ ಉಂಟಾಗಿರುವ ತಪ್ಪು ತಿಳುವಳಿಕೆ ದೂರಾಗಿದೆಯೆಂಬುದನ್ನು ಕಂಡು ನನಗೆ ಸಂತೋಷವಾಗಿದೆ. ಜನತೆಯ ಇಚ್ಛೆಗೆ ವಿರೋಧವಾಗಿ ಹಿಂದಿಯನ್ನು ಅವರ ಮೇಲೆ ಹೇರುವದಿಲ್ಲೆಂದು ಜನರಿಗೆ ಈಗ ಖಾತ್ರಿಯಾಗಿದೆ. ಆಯಾ ರಾಜ್ಯಗಳು ತಮ್ಮ ತಮ್ಮ ಪ್ರಾದೇಶಿಕ ಭಾಷೆಯಲ್ಲಿಯೇ ತಮ್ಮ ಸರಕಾರಿ ವ್ಯವಹಾರ ಸಾಗಿಸಹತ್ತಿದರೆ ಮತ್ತು ಶಿಕ್ಷಣ ಮಾಧ್ಯಮವು ಪ್ರಾದೇಶಿಕ ಭಾಷೆಯೇ ಆದರೆ ಒಂದು ರಾಜ್ಯದವರು ಇನ್ನೊಂದು ರಾಜ್ಯದವರೊಡನೆ ಮಾತಾಡಲು ಒಂದು ರಾಷ್ಟ್ರಭಾಷೆ ಬೇಕೇಬೇಕೆಂದು ಅನಿಸುವದು. ಆದರೆ ಸರಳ ಸುಲಭ ಹಿಂದಿಯನ್ನು ಕಲಿಯುವದಕ್ಕೆ ಯಾರ ಆಕ್ಷೇಪವೂ ಉಳಿಯಲಾರದು. ಇದೇ ಮೇರೆಗೆ ಹಿಂದಿಯೂ ಬೇರೆ ಬೇರೆ ಭಾಷೆಗಳಿಂದ ಶಬ್ದ ಸಂಪತ್ತಿ, ವಿಚಾರ ಪದ್ಧತಿ ಇತ್ಯಾದಿ ಬಳಸಿಕೊಂಡು ಇನ್ನೂ ಬೆಳೆದು ಎಲ್ಲರ ಸಂಪರ್ಕ

ಭಾಷೆಯಾಗಬೇಕು. ಹಿಂದೀ ಪ್ರದೇಶದಲ್ಲಿರುವ ಸಾಧಾರಣ ೩೦ ವಿಶ್ವವಿದ್ಯಾಲಯಗಳು ಈ ದಿಸೆಯಲ್ಲಿ ಹೆಚ್ಚು ಕಾರ್ಯ ಮಾಡಬೇಕು. ಗುಜರಾಥವು ಹಿಂದಿಯನ್ನು ತನ್ನ ಎರಡನೇ ಭಾಷೆಯೆಂದು ಸ್ವೀಕರಿಸಿದೆ. ಮಹಾರಾಷ್ಟ್ರವಂತೂ ಹಿಂದಿಯನ್ನು ತನ್ನದೆ ಭಾಷೆಯನ್ನಾಗಿ ಮಾಡಿಕೊಂಡಿದೆ. ಈ ರೀತಿ ಪ್ರೇಮಾದರಗಳು ಬೆಳೆದರೆ ಭಾಷೆಯ ಪ್ರಶ್ನೆಯೇ ಉಂಟಾಗಲಾರದು.

ನಮ್ಮ ಆಡಳಿತದ ಸಿಬ್ಬಂದಿ

ಬ್ರಿಟಿಶರ ಕಾಲದಲ್ಲಿ ಯಾವ ಆಡಳಿತ ಸಿಬ್ಬಂದಿ ಇದ್ದಿತೋ ಅದನ್ನೇ ನಾವು ಈಗಲೂ ಉಳಿಸಿಕೊಂಡು ಬಂದಿದ್ದೇವೆ. ಬ್ರಿಟಿಶರ ಕಾಲದ ನೌಕರರು ಬ್ರಿಟಿಶ್ ಸಾಮ್ರಾಜ್ಯಶಾಹಿಯ ಪರಮನಿಷ್ಠ ಸೇವಕರಾಗಿ ಅದು ಅಚಲವಾಗಿ ಉಳಿಯುವಂತೆ ವ್ಯವಹರಿಸುತ್ತ ಬಂದರು. ಸ್ವಾತಂತ್ರ್ಯ ಬಂದ ನಂತರ ಈ ನೌಕರ ವರ್ಗದಲ್ಲಿ ಸ್ವಲ್ಪ ಬದಲಾವಣೆಯಾದರೂ ಮುಖ್ಯ ರಚನೆಯನ್ನು ಹಾಗೇ ಉಳಿಸಲಾಯಿತು. ಉಚ್ಚ ವರ್ಗದ ನೌಕರರನ್ನು ಈಗ ವಿಶ್ವವಿದ್ಯಾಲಯಗಳ ಅತ್ಯುತ್ತಮ ಜಾಣರಾದವರಿಂದ ಪಡೆಯುತ್ತಿದ್ದು ಅವರು ಕೂಡಾ ಬ್ರಿಟಿಶ್ ತತ್ವ ಮತ್ತು ಸಂಪ್ರದಾಯದಂತೆಯೇ ವರ್ತಿಸುತ್ತಿದ್ದಾರೆ. ಇಂಥ ಅಧಿಕಾರಿಗಳು ತಾವಾಯಿತು; ತಮ್ಮ ನೌಕರಿಯಾಯಿತು; ಜನರು ಹೇಗಿದ್ದರೇನು ಕಾಯದೆಬದ್ಧವಾಗಿ ಕೆಲಸ ಮಾಡಿದರಾಯಿತು ಎಂದರೆ ಸಾಲದು. ನಮ್ಮ ದೇಶದಲ್ಲಿ ಅನೇಕ ವ್ಯತ್ಯಾಸಗಳಿವೆ. ಉಳ್ಳವರು ಬಡವರನ್ನು ಹತ್ತಿಕ್ಕುತ್ತಿದ್ದಾರೆ. ಇಂಥ ಅವಸ್ಥೆಯಲ್ಲಿ ನೌಕರ ವರ್ಗವು ಪರಕೀಯನಂತೆ ಅಲಿಪ್ತವಾಗಿ ಉಳಿದರೆ ಅವರ ಆಡಳಿತ ಉಳ್ಳವನಿಗೆ ಸಹಾಯಕವಾಗಿ ಬಡವನಿಗೆ ಮಾರಕವಾಗುವದು, ಆಗ ಉಳ್ಳವನು ಪುನಃ ಬಡವನ ಸುಲಿಗೆ ಮಾಡಲು ಉತ್ತೇಜನ ದೊರೆಯುವದು. ಈಗ ನಾವು ನೂರಾರು ವರ್ಷ ಹಿಂಧೆ ಬಿದ್ದಿದ್ದನ್ನು ಹತ್ತಿಪ್ಪತ್ತು ವರ್ಷಗಳಲ್ಲಿಯೇ ಸಾಧಿಸಬೇಕೆಂದು ಹವಣಿಸುತ್ತಿರುವಾಗ ಇಂಥ ತಟಸ್ಥ ನೌಕರ ವರ್ಗವು ನಮ್ಮ ಆತುರತೆಗೆ ಸಹಾಯಕವಾಗುವ ಬದಲು ಕಂಟಕವೇ ಆಗುವದು. ಆದುದರಿಂದ ನಮ್ಮ ಆಡಳಿತ ಸಿಬ್ಬಂದಿ ಇಂಥಧೊಂದು ಧ್ಯೇಯ ಸಾಧಿಸಲೇಬೇಕೆಂಬ ಉದ್ದೇಶವುಳ್ಳದ್ದಾಗಿರಬೇಕು. ಪ್ರಜಾಪ್ರಭುತ್ವ, ಸಮಾಜವಾದ, ಜಾತ್ಯಾತೀತತೆ ಈ ಮೂರೂ ಧ್ಯೇಯಗಳನ್ನು ಸಾಧಿಸುವಂಥ ತತ್ವನಿಷ್ಠೆ

ನೌಕರರೇ ನಮಗೆ ಈಗ ಬೇಕು. ಇದಾಗಬೇಕಾದರೆ ಸೈದ್ಯದ ನೌಕರರಲ್ಲಿ ಪ್ರಚಂಡ ವಿಚಾರಕ್ರಾಂತಿಯಾಗಬೇಕು. ಪ್ಲಾಗು ಅಡಳಿತದ ನಿಯಮ ನಿಬಂಧನೆ ನಡವಳಿಕೆಗಳಲ್ಲೂ ತಿದ್ದುಪಡಿಯಾಗಬೇಕು. ಇಂಥ ನೌಕರರನ್ನು ನೌಕರಿಗೆ ತೆಗೆದುಕೊಳ್ಳುವಾಗ ನಾರ್ವಜನಿಕ ಸೇವಾ ಆಯೋಗದಂಥ ಸಂಸ್ಥೆಗಳು ನಮ್ಮ ಪ್ರಜಾಪ್ರಭುತ್ವ, ಸಮಾಜವಾದ ಮತ್ತು ಜಾತ್ಯಾತೀತತೆ ಇವುಗಳನ್ನು ಭದ್ರಪಡಿಸುವಂಥವರನ್ನೇ ತೆಗೆದುಕೊಳ್ಳುವ ಪರಿಪಾಠ ಸಾಕಬೇಕು.

ವ್ಯಕ್ತಿ ಒಡೆತನ – ಸಮಾಜ ಒಡೆತನ

ವ್ಯಕ್ತಿ ಒಡೆತನ ಎಷ್ಟರವರೆಗೆ ಇರಬೇಕು, ಸಮಾಜ ಒಡೆತನ ಎಷ್ಟಿರಬೇಕಂಬ ಬಗ್ಗೆ ಅನೇಕ ಕಾಂಗ್ರೆಸ್ಸಿಗರಲ್ಲಿ ಇನ್ನು ನಿಚ್ಚಳ ಕಲ್ಪನೆ ಇಲ್ಲ. ಫರೀದಾಬಾದ ಕಾಂಗ್ರೆಸ್ಸಿನಲ್ಲಿ ಸಾಮಾಜಿಕ ಒಡೆತನದ ಬಗ್ಗೆ ಕೆಲವು ಮುಖ್ಯ ನಾಯಕರು ಹೊರಡಿಸಿದ ವಿಚಾರವೂ ಗೊಂದಲಕ್ಕೀಡು ಮಾಡಿದೆ. ಯಾವುದೊಂದು ಉದ್ಯಮ ಲಾಭದಾಯಕವಾಗುತ್ತಿದ್ದರೇ ಸರಕಾರ ಅದನ್ನು ಕೈಯಲ್ಲಿ ತೆಗೆದುಕೊಳ್ಳಬೇಕೆಂದು ಆ ಕಾಲಕ್ಕೆ ವ್ಯಕ್ತಪಡಿಸಲಾಯಿತು. ಇದು ಅಷ್ಟೊಂದು ಸಮಂಜಸ ಕಾಣುವದಿಲ್ಲ. ಕಾಂಗ್ರೆಸ್ಸು ಸ್ವೀಕರಿಸಿನ ಉದ್ದೇಶಕ್ಕೂ ಇದು ಸರಿ ಹೋಗುವದಿಲ್ಲ, ಸರಕಾರ ಲಾಭ ಮಾಡಿಕೊಳ್ಳುವಂಥ ಉದ್ಯಮಗಳಲ್ಲಿ ಖಾಸಗಿ ಉದ್ಯಮಗಳನ್ನು ರಾಷ್ಟ್ರೀಯ ಉದ್ದೇಶಗಳಿಗೆ ಧಕ್ಕೆ ತಾರದ ರೀತಿಯಲ್ಲಿ ಮಾಡಬೇಕೇ ಹೊರತು ಹಾಗೆ ಧಕ್ಕೆ ತಂದರೆ ಸರಕಾರವು ಕೈ ಹಾಕಿ ಅವುಗಳನ್ನು ವಶಪಡಿಸಿಕೊಳ್ಳುವದೆಂದು ತಿಳಿಸುವ ಕಾಲವೀಗ ಬಂದಿದೆ. ಆದ್ದರಿಂದ ಇಂತಿಷ್ಟು ಖಾಸಗಿ, ಇಂತಿಷ್ಟು ಸರಕಾರಿ ಎಂದು ವಿಭಾಗಿಸದೆ ಎಲ್ಲ ಉದ್ಯಮಗಳೂ ರಾಷ್ಟ್ರೀಯ ಉದ್ಯಮಗಳೇ ಎಂದು ಭಾವಿಸಬೇಕು. ಉದ್ಯಮಗಳು ಖಾಸಗಿಯಾಗಲಿ ಸರಕಾರವಾಗಲಿ ರಾಷ್ಟ್ರೀಯ ಉದ್ಯಮವೆಂಥೇ ಭಾವಿಸಿ ರಾಷ್ಟ್ರದ ಆಧಾರಸ್ತಂಭಗಳಾದ ಪ್ರಜಾಪ್ರಭುತ್ವ, ಸಮಾಜವಾದ, ಜಾತ್ಯಾತೀತತೆ ಇವುಗಳಿಗೆ ಚ್ಯುತಿಬಾರದಂತೆ ಎಲ್ಲರೂ ನಡೆಯಲೇಬೇಕೆಂದು ನಾವು ಒತ್ತಾಯಿಸಬೇಕು. ಈಗ ತೊಂದರೆ ಕೊಡುತ್ತಿರುವ ಕ್ರಮವನ್ನು ತಿದ್ದಿಕೊಳ್ಳಬೇಕಾದರೆ ಸರಕಾರಿ ಒಡೆತನವನ್ನು ನಾವು ಬೆಳಿಸಲೇಬೇಕು. ಅರ್ಥವ್ಯವಸ್ಥೆಯ ಅಧಿಕಾರದ ಪ್ರಾಮುಖ್ಯ ಭಾಗವನ್ನು ಸರಕಾರವೇ ವಹಿಸಿಕೊಳ್ಳಬೇಕು.

ಇದರ ಪ್ರಾರಂಭವೆಂದು ಆಯಾತ ವ್ಯಾಪಾರವನ್ನು ಈ ಕೂಡಲೇ ರಾಷ್ಟ್ರೀ ಕರಣ ಮಾಡಬೇಕು. ಜನತಾಭಕ್ಷಣಕ್ಕೆ ಅವಶ್ಯವಾದ ಧಾನ್ಯ ಇತ್ಯಾದಿ ಉತ್ಪಾದನೆ ಮಾಡುವದನ್ನು ಸರಕಾರವು ಲಕ್ಷಪೂರ್ವಕವಾಗಿ ನೋಡುತ್ತಿರ ಬೇಕು. ಕೋಟಿಗಟ್ಟಲೆ ಜನರು ಉಪವಾಸ ಬೀಳುತ್ತಿರುವಾಗ ಜನರು ಧಾನ್ಯ ಬೆಳೆಯುಬೆ ರೊಕ್ಕದ ಬೆಳೆ ಬೆಳಿಯುತ್ತಿರುವದು ವಿಪರ್ಯಾಸ ಸನ್ನಿ ವೇಶವಾಗಿದೆ. ದುಂದುವೆಚ್ಚದ ಬಹು ಬೆಲೆಯ ವಸ್ತುಗಳನ್ನೇ ನಿರ್ಮಿಸುವ ದಿದ್ದರೆ ಪರದೇಶಗಳಿಗೆ ರಫ್ತು ಮಾಡುವದಿದ್ದರೆ ಮಾಡಬೇಕು. ಇಲ್ಲವೆ ಅಂಥ ವಸ್ತುಗಳ ಮೇಲೆ ವಿಳಲಾರದಷ್ಟು ಕರ ಕೂಡ್ರಿಸಬೇಕು.

ಸಮಾಜವಾದವನ್ನು ನಾವು ಬಳಕೆಯಲ್ಲಿ ತರುವದೆಂದರೆ ಸರಕಾರಿ ಒಡೆತನದ ಉದ್ಯಮಗಳನ್ನು ನಾವು ನಿರ್ದಿಷ್ಟವಾಗಿ ಕೂಲಂಕಷವಾಗಿ ಪರಿಶೀಲಿ ಸಬೇಕು. ಸಮಾಜವಾದವೇ ನಮ್ಮ ಸದುದ್ದೇಶವಾಗಿದ್ದರೆ ದುಡಿಯುವವರು ಹಾಗೂ ದುಡಿಸಿಕೊಳ್ಳುವವರಲ್ಲಿ ಘರ್ಷಣೆಯೇ ಉಂಟಾಗಬಾರದು. ನಾವು ದುಡಿಸಿಕೊಳ್ಳುವವರು ಅವರು ದುಡಿಯುವವರು ಎಂದು ವರ್ಗಭೇದಮಾಡದೆ ಎಲ್ಲರೂ ರಾಷ್ಟ್ರಕ್ಕಾಗಿ ದುಡಿಯುವವರೇ. ರಾಷ್ಟ್ರದ ಸಂಪತ್ತನ್ನು ಡೆಚ್ಚಿಸು ವದೇ ಎಲ್ಲರ ಧ್ಯೇಯ ಎಂಬ ವಿಚಾರಸರಣಿ ಒಡಮೂಡಬೇಕು. ಈ ಭಾವನೆ ಬರುವದಕ್ಕಾಗಿ ದುಡಿಯುವವರನ್ನೇ ಮುಂದೆ ಆಡಳಿತದಲ್ಲಿ ತೆಗೆದುಕೊಳ್ಳುವ ಕ್ರಮ ಮಾಡಬೇಕು.

ತರುಣರ ಅಸಂತೋಷ

ತರುಣರಿಗೆ ನಾವು ಶಿಕ್ಷಣ ಕೊಡುತ್ತಿದ್ದಂತೆಯೇ ಅವರಿಗೆ ಉದ್ಯೋಗ ಒದಗಿಸಿಕೊಡದಿದ್ದುದೇ ಅವರು ಅಸಂತೋಷವುಂಟಾಗಲು ಕಾರಣವಾಗಿದೆ ಸದ್ಯಕ್ಕೆ ನಮ್ಮ ಹಣಕಾಸಿನ ಪರಿಸ್ಥಿತಿ ನೋಡಿದರೆ ತಾಂತ್ರಿಕ ಜ್ಞಾನದಲ್ಲಿ ತರಬೇತಿ ಪಡೆದನಥಪರನ್ನೂ ಸಂಪೂರ್ಣವಾಗಿ ನಾವು ಕೆಲಸಕ್ಕೆ ತೆಗೆದುಕೊ ಳ್ಳಲಾರದಂತಾಗಿದ್ದೇವೆ ಈ ಬಗ್ಗೆ ಕೇರಳ, ಪಶ್ಚಿಮ ಬಂಗಾಲಗಳು ನಮಗೆ ಸಮಸ್ಯೆಗಳಾಗಿವೆ. ಅಲ್ಲಿ ಜನಸಂಖ್ಯೆ ಹೆಚ್ಚು. ಶಿಕ್ಷಣವೂ ಬೆಳೆದಿದೆ. ಅದರ ಜೊತೆಗೆ ನಿರುದ್ಯೋಗವೂ ಬೇರೆ ಕಡೆಗಳಿಗಿನತ ಹೆಚ್ಚಾಗಿದೆ. ಅಂದಮೇಲೆ ನಾವು ಅಲ್ಲಿಯೆ ತರುಣರ ಬಗ್ಗೆ ದಕ್ಷತೆ ವಹಿಸದಿದ್ದರೆ ಅವರ ಅಸನತೋಷ

ಬೆಳೆದು ಗಲಾಟೆ ಪ್ರಾರಂಭವಾಗುತ್ತದೆ. ಆದ್ದರಿಂದ ತರುಣರನ್ನು ನಾವು ಗೌರವಿಸಿ ಪ್ರೌಢರಂತೆ ನಡೆಸಿಕೊಳ್ಳಬೇಕು. ಅವರಿಗೆ ಯಾವ್ಯಯಾವ ಉದ್ಯೋಗ ಒದಗಿಸಿಕೊಡಲು ಸಾಧ್ಯವೊ ಎಂಬುದನ್ನು ನಾವು ಶೋಧಿಸಬೇಕು. ಪಳ್ಳಿಗಳಲ್ಲಾಗಲಿ, ನಗರಗಳಲ್ಲಾಗಲಿ ಈ ನಿರುದ್ಯೋಗತನವನು ಕಡಿಪಿ ಮಾಡಲು ನಾವು ಹೆಚ್ಚು ಹೆಚ್ಚು ಉದ್ಯಮ ಸ್ಥಾಪಿಸಿಯಾಗಲಿ ಅಥವಾ ತರುಣರೇ ವೈಯಕ್ತಿಕ ಸ್ವಾವಲಂಬನ ಕಾರ್ಯಕ್ರಮ ಕೈಕೊಳ್ಳಲು ನೆರವು ನೀಡಬೇಕು. ಯಾವ ಉದ್ಯೋಗಗಳನ್ನು ಕೈಕೊಳ್ಳಲು ತಮಗೆ ಸಾಧ್ಯವಿದೆ ಎಂದು ತರುಣರೇ ಯೋಚಿಸುವಂತೆ ಅವರಿಗೆ ಉತ್ತೇಜನ ಕೊಡಬೇಕು.

ಹಿಂದುಳಿದವರ ಸಮಸ್ಯೆ

ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಗಳ ಕಲ್ಯಾಣವಾಗಬೇಕಾದರೆ ನಮ್ಮ ಸಮಾಜ ಮತ್ತು ಆರ್ಥಿಕ ವ್ಯವಸ್ಥೆಯ ಪುನರ್ಘಟನೆಯಾಗಬೇಕೆಂದೂ ಅಲ್ಲಿವುಗಳಲ್ಲಿ ಅವರ ಪರಿಶ್ರಮಕ್ಕೆ ತಕ್ಕ ಲಾಭ ದೊರೆಯುವಂತಾದರೆ ಸಮಾಜದಲ್ಲಿ ಅವರ ಜೀವನ ಉನ್ನತವಾಗುವದೆಂದೂ ನಾನು ಹೇಳುತ್ತ ಬಂದಿದ್ದೇನೆ. ಈ ಪ್ರಕಾರ ಔದ್ಯೋಗಿಕ ಕ್ರಾಂತಿಯ ಮೂಲಕ ಯಾರ ಆರ್ಥಿಕ ಸ್ಥಿತಿ ಸುಧಾರಿಸಿದೆಯೋ ಅವರು ಪೊದಲಿನಂತೆ ಕೀಳುತನದಿಂದ ಬಗ್ಗಿ ನಡೆಯಲು ಇಚ್ಛಿಸುವದಿಲ್ಲ. ಇದನ್ನು ಕಂಡು ಮೇಲ್ತರಗತಿಯವರು ಅವರನ್ನು ನಾನಾ ಹಿಂಸೆಗಳಿಗೆ ಗುರಿ ಮಾಡುತ್ತಿರುವುದು ಕಂಡು ಬರುತ್ತಿದೆ. ಇದರಿಂದ ಸಮಾಜದ ಮೇಲ. ವರ್ಗದ ಜನತೆಯ ಮನೋಭೂಮಿಕೆಯಲ್ಲಿ ಏದೂ ಬದಲಾವಣೆಯಾಗಿಲ್ಲವೆಂಬುದು ಕಂಡು ಬರುತ್ತಿದೆ. ಕೆಲವರು ಉದಾರವಾದಿಗಳನತೆ ಮಾತನಾಡುತ್ತಿದ್ದರೂ ಆಳವಾಗಿ ಅಭ್ಯಸಿಸಿದ ಸಮಾಜದ ಪ್ರವೃತ್ತಿಗೂ ಅವರ ಪ್ರವೃತ್ತಿಗೂ ಏದೂ ಭೇದವಿಲ್ಲೆಂಬುದು ಕಾಣದಿರದು. ಈ ಪರಿಸ್ಥಿತಿ ಹೋಗಬೇಕಾದರೆ ಅವರ ಆರ್ಥಿಕ ಸ್ಥಿತಿ ಸುಧಾರಿಸಲೇಬೇಕು. ಅಂಥ ಜನರಿಗೆ ಶಿಷ್ಯವೃತ್ತಿ, ತಾಂತ್ರಿಕ ಶಿಕ್ಷಣ ವೃತ್ತಿ, ಉನ್ನತ ನೌಕರಿ ಕೊಡುವ ಕ್ರಮ ಹೆಚ್ಚಾಗಬೇಕು. ಅವರಿಗಾಗಿ ಕಾಯ್ದಿಟ್ಟ ಸ್ಥಳಗಳ ಅವಧಿಯನ್ನು ಮತ್ತೆ ೧೦ವರ್ಷಗಳ ವರೆಗೆ ಬೆಳಿಸಿದುದು ಯುಕ್ತವೇ ಆಗಿದೆ. ಇಂಥ ಜನರಿಗೆ ಹಳ್ಳಿಗಳಲ್ಲಾಗಲಿ ಪಟ್ಟಣಗಳಲ್ಲಾಗಲಿ ವಸತಿ ಕೊಡುವದಿದ್ದರೆ ಉಳಿದವರ ಜೊತೆಗೇನೇ ಕೊಡಬೇಕು: ಅವರಿಗಾಗಿ